# ಹುಲಿಮಂಗಲ ಗ್ರಾಮ ಪಂಚಾಯಿತಿ ಕಾರ್ಯಾಲಯ

ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 105.

ಸಂಖ್ಯೆ : ಹು.ಗ್ರಾ.ಪಂ : 84/2025-26 ದಿನಾಂಕ : 08-12-2025

ಇವರಿಗೆ ,

ನಗರ ಯೋಜಕ ಸದಸ್ಯರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
5ನೇ ಮುಖ್ಯರಸ್ತೆ, ಕುಮಾರಪಾರ್ಕ್ ವೆಸ್ಟ್,
ಗುಟ್ಟಹಳ್ಳಿ,ಬೆಂಗಳೂರು–56020

ಮಾನ್ಯರೇ

ವಿಷಯ :– ನೀರು ಸರಬರಾಜಿಗೆ ಎನ್.ಓ.ಸಿ ಮತ್ತು ರಸ್ತೆ ಸಂಪರ್ಕ ದೃಢೀಕರಣ ನೀಡುವ ಬಗ್ಗೆ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹುಲಿಮಂಗಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾರಗೊಂಡನಹಳ್ಳಿ ಗ್ರಾಮದ ಸರ್ವೆ ನಂಬರ್ 69/1 ರಲ್ಲಿ 2–20 ಎ/ಗುಂಟೆ ಮತ್ತು 70/4 ರಲ್ಲಿ 0–20 ಎ/ಗುಂಟೆ 72/1 ರಲ್ಲಿ 2–00 ಎ/ಗುಂಟೆ 72/2 ರಲ್ಲಿ 02–15 ಎ/ಗುಂಟೆ 73/1 ರಲ್ಲಿ 2–09 ಎ/ಗುಂಟೆ ಒಟ್ಟು 9 ಎಕರೆ 24 ಗುಂಟೆ ವಿಸ್ತೀರ್ಣ ಜಮೀನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಯಾಗಿರುತ್ತದೆ. ತದನಂತರ ಬಿ.ಡಿ.ಎ ಸಕ್ಷಮ ಪ್ರಾಧಿಕಾರದಿಂದ ಸಂಖ್ಯೆ:ಬೆಂಅಪ್ರಾ/ನಯೋಸ/(DLP-04/1790/2025-26) ದಿನಾಂಕ:06.08.2025 ರಂದು ಸದರಿ ಸರ್ವೆ ನಂಬರ್ ನ ಜಮೀನಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸತಿ ಸಮುಚ್ಚಯಕ್ಕೆ ವಿನ್ಯಾಸ ನಕ್ಷೆ ಅನುಮೋದನೆಯಾಗಿರುತ್ತದೆ. ನೀರು ಪೂರೈಸಲು ಮನವಿ ಪತ್ರವನ್ನು ಸದರಿ ಸರ್ವೆ ನಂಬರಿನ ಅರ್ಜಿದಾರರು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದು, ನೀರು ಸರಬರಾಜಿಗೆ ಎನ್.ಓ.ಸಿ ನೀಡಲು ಮತ್ತು ಸಂಪರ್ಕ ರಸ್ತೆ ಇರುವ ಬಗ್ಗೆ ದೃಢೀಕರಣ ನೀಡುವಂತೆ ಕೋರಿರುತ್ತಾರೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಸಾರ್ವಜನಿಕರಿಗೆ ನೀರಿನ ಸೌಲಭ್ಯ ಒದಗಿಸಿ ಉಳಿಕೆ ನೀರನ್ನು ಸದರಿ ಉದ್ದೇಶಿತ ಸ್ವತ್ತಿಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀರು ಸರಬರಾಜಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ. ಮತ್ತು ಸದರಿ ಉದ್ದೇಶಿತ ವಸತಿ ಸಮುಚ್ಚಯದ ಜಮೀನಿಗೆ 50 ಅಡಿ ರಸ್ತೆ ಸಂಪರ್ಕ ಇರುತ್ತದೆ ಎಂಬುದಾಗಿ ದೃಢೀಕರಿಸಲಾಗಿದೆ.

1.ನೀರು ಸರಬರಾಜು ಸಂಬಂಧಿಸಿದಂತೆ ಸಂಪೂರ್ಣ ವೆಚ್ಚವನ್ನು ಮನವಿ ಪತ್ರದಲ್ಲಿ ತಿಳಿಸಿರುವಂತೆ ಅರ್ಜಿದಾರರೆ ಭರಿಸಬೇಕು.

2.ಯೋಜನಾ ಪ್ರಾಧಿಕಾರದ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3.ಪ್ರಸ್ತುತವಿರುವ ನಿಯಮ/ಕಾನೂನುಗಳಿಗೆ ವಿರುದ್ಧವಾಗಿ ತಾವು ವಸತಿ ಸಮುಚ್ಚಯ ನಿರ್ಮಾಣ ಮಾಡಿದಲ್ಲಿ ಮತ್ತು ಸಾರ್ವಜನಿಕರಿಂದ ಯಾವುದೇ ನ್ಯಾಯಬದ್ಧ ದೂರುಗಳು ಬಂದಲ್ಲಿ ಈ ನಿರಾಕ್ಷೇಪಣಾ ಪತ್ರವನ್ನು ರದ್ದುಪಡಿಸಲಾಗುವುದು.

ತಮ್ಮ ವಿಶ್ವಾಸಿ

ಪಂಚಾಯತ್ ಅಭಿವೃದ್ಧಿ ಅಧಿಕಾರಿ
ಹುಲಿಮಂಗಲ ಗ್ರಾಮ ಪಂಚಾಯಿತಿ

ಪ್ರತಿಯನ್ನು :

1.M/S Habulus Homes Pvt ltd. Represented by its Directors R.Vinod Kumar Giddaluru Ramesh Babu and M.Durgapathi Naidu Ananthanagara Electronic cityPhase-2 Bangalore-560100 and H V Dharmesh JP Nagar 8th Phase Bangalore 560076